# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಉಬ್ರಾಣಿ-ಅಮೃತಾಪುರ ಯೋಜನೆಯ 1ನೇ ಪಂಪ್‌ಹೌಸ್ ಮತ್ತು 2ನೇ ಪಂಪ್‌ಹೌಸ್‌ನಲ್ಲಿ ಪಂಪಿಂಗ್ ಮಿಷಿನರಿ ಮತ್ತು Electro Mechanical Components ಗಳನ್ನು ಬದಲಿಸುವ ಕಾಮಗಾರಿಯ ರೂ.7.00 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:-** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ಕನೀನಿ/ತುಂ.ಮೇ.ಯೋ.ವ /ಉ-ಅ ಏ.ನೀ./14/ಅಂದಾಜು/2021/2171 ದಿನಾಂಕ:04.08.2021.

******

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ ಇಲ್ಲಿನ ಉಬ್ರಾಣಿ-ಅಮೃತಾಪುರ ಯೋಜನೆಯ 1ನೇ ಪಂಪ್‌ಹೌಸ್ ಮತ್ತು 2ನೇ ಪಂಪ್‌ಹೌಸ್‌ನಲ್ಲಿ ಪಂಪಿಂಗ್ ಮಿಷಿನರಿ ಮತ್ತು Electro Mechanical Components ಯಂತ್ರೋಪಕರಣಗಳು 10 ವರ್ಷ ಹಳೆಯದಾಗಿದ್ದು, ಆಗಿಂದ್ದಾಗೆ ದುರಸ್ತಿಗೆ ಬರುತ್ತಿದ್ದು, ಯಂತ್ರೋಪಕರಣಗಳ ಬಿಡಿಭಾಗಗಳು ಸವಕಳಿಗೊಂಡು ತುಂಡಾಗಿರುತ್ತವೆ. ಇವು ಹಳೆಯ ಯಂತ್ರೋಪಕರಣಗಳಾಗಿದ್ದು, ಇದರ ಬಿಡಿಭಾಗಗಳು ಮಾರುಕಟ್ಟೆಯಲ್ಲಿ ಲಭ್ಯವಿರುವುದಿಲ್ಲವೆಂದು ತಿಳಿಸಿ, ನಿರ್ವಹಣೆ ಕಾಮಗಾರಿಗಳಿಗೆ ಅನುವು ಮಾಡಿಕೊಂಡ ಮೊತ್ತಕ್ಕಿಂತ ಹೆಚ್ಚು ವೆಚ್ಚವಾಗುತ್ತಿರುವುದಾಗಿ ಹಾಗೂ ಬಿಡಿಭಾಗಗಳ ಸರಬರಾಜು ಸಂಬಂಧ ಮೂಲ ತಯಾರಿಕಾ ಕಂಪನಿಯವರ ಬಳಿ ವಿಚಾರಿಸಲಾಗಿ ಈ ವಿನ್ಯಾಸದ ಪಂಪುಗಳ ತಯಾರಿಕೆಯನ್ನು ನಿಲ್ಲಿಸಿದ್ದು, ಪಂಪುಗಳ ಬಿಡಿಭಾಗಗಳು ಲಭ್ಯವಿಲ್ಲವೆಂದು ಮತ್ತು ಅವುಗಳ ಸರಬರಾಜು ಕುರಿತು ಮುಂಚಿತವಾಗಿ ಆರ್ಡರ್ ಮಾಡಿದಲ್ಲಿ ಅವುಗಳನ್ನು ಹೊಸದಾಗಿ ತಯಾರಿಸಿ ಸರಬರಾಜು ಮಾಡಲು ಕಾಲಾವಕಾಶಬೇಕಾಗುತ್ತದೆ ಎಂದು ತಯಾರಿಕ ಕಂಪನಿಯವರು ತಿಳಿಸಿರುವುದಾಗಿ ವ್ಯವಸ್ಥಾಪಕ ನಿರ್ದೇಶಕರು, ವರದಿ ಮಾಡಿರುತ್ತಾರೆ.

ಮುಂದುವರೆದು, ನಿಗಮದ ಏತ ನೀರಾವರಿ ಯೋಜನೆಗಳ ಸಮಾಲೋಚಕರ ಮತ್ತು ನಿಗಮದ ವಿದ್ಯುತ್ ಸಮಾಲೋಚಕರ ಸೂಚನೆಯ ಮೇರೆಗೆ ಉಬ್ರಾಣಿ-ಅಮೃತಾಪುರ ಯೋಜನೆಯ 1ನೇ ಪಂಪ್‌ಹೌಸ್ ಮತ್ತು 2ನೇ ಪಂಪ್‌ಹೌಸ್‌ನಲ್ಲಿ ತುರ್ತಾಗಿ ಬದಲಿಸಬೇಕಾಗಿರುವ ಕಾಂಪೋನೆಂಟ್‌ಗಳನ್ನು ಒಳಗೊಂಡ ರೂ.7.00 ಕೋಟಿಗಳ ಪ್ರಸ್ತಾವನೆಯನ್ನು ತಯಾರಿಸಿ, ದಿನಾಂಕ:06.07.2021 ರಂದು ಜರುಗಿದ ನಿಗಮದ 84ನೇ ಅಂದಾಜು ಪರಿಶೀಲನಾ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿದ್ದು, ಸಮಿತಿಯು ಸದರಿ ಯೋಜನೆಗೆ ನಿಗಮದ ನಿರ್ದೇಶಕರ ಮಂಡಳಿಯ ಅನುಮೋದನೆ ಪಡೆದು, ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತದೆ ಹಾಗೂ ಪ್ರಸ್ತಾವನೆಯನ್ನು ದಿನಾಂಕ:23.07.2021 ರಂದು ಜರುಗಿದ ನಿಗಮದ 96ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದ್ದು, ಮಂಡಳಿಯು ಈ ವಿಷಯವನ್ನು ವಿವರವಾಗಿ ಚರ್ಚಿಸಿದ ನಂತರ ಸದರಿ ಪ್ರಸ್ತಾವನೆಯ ರೂ.7.00 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಅನುಮೋದನೆ ನೀಡಿ, ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ ಎಂದು ತಿಳಿಸಿ ಸದರಿ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ರವರು ಕೋರಿರುತ್ತಾರೆ.

...2

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 72 ಎಂಎಂಬಿ 2021,**
**ಬೆಂಗಳೂರು, ದಿನಾಂಕ:08.11.2021**

ಉಬ್ರಾಣಿ-ಅಮೃತಾಪುರ ಏತ ನೀರಾವರಿ ಯೋಜನೆಯ 1ನೇ ಪಂಪ್‌ಹೌಸ್ ಮತ್ತು 2ನೇ ಪಂಪ್‌ಹೌಸ್‌ನಲ್ಲಿ ಪಂಪಿಂಗ್ ಮಿಷಿನರಿ ಮತ್ತು Electro Mechanical Components ಗಳನ್ನು ಬದಲಿಸುವ ಕಾಮಗಾರಿಯ ರೂ.7.00 ಕೋಟಿ (ರೂಪಾಯಿ ಏಳು ಕೋಟಿಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಒದಗಿಸಲಾಗಿರುವ ಅನುದಾನದಲ್ಲಿಯೇ ಅವಶ್ಯಕ ಅನುದಾನವನ್ನು ಭರಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:FD 03 TFP 2020 ದಿನಾಂಕ:31.08.2020 ಹಾಗೂ FD 01 TFP 2021 ದಿನಾಂಕ:30.09.2021 ಗಳನ್ವಯ ಹೊರಡಿಸಲಾಗಿದೆ.

09 NOV 2021
Office of the Accountant General (A & E)
Main Building, Bengaluru

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

Shubha K 08/11/2021

**(ಶುಭಾ ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)(ಪ್ರ)
ಜಲಸಂಪನ್ಮೂಲ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ) ಕರ್ನಾಟಕ ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ, ಆರ್ಥಿಕ ಕೋಶ) ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಯವರ ಆಪ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ.
8. ಸರ್ಕಾರದ ಕಾರ್ಯದರ್ಶಿ ಯವರ ಆಪ್ತ ಕಾರ್ಯದರ್ಶಿ,, ಜಲಸಂಪನ್ಮೂಲ ಇಲಾಖೆ.
9. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಕೃ.ಭಾ.ಜ.ನಿ.) ಜ.ಸಂ. ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಕೃ.ಭಾ.ಜ.ನಿ.) ಜಲಸಂಪನ್ಮೂಲ ಇಲಾಖೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.